ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

ಸಂಖ್ಯೆ : ಹಿಮ್ಸ್/ಸಿವಿಲ್/ಗ್ರಂ.ಕ.ಸಾ/25/2022-23 ದಿನಾಂಕ: 13.07.2023

ಕೊಟೇಶನ್ ಅಧಿಸೂಚನೆ

ವಿಷಯ: ಸಂಸ್ಥೆಯ ಬೋಧಕ ಆಸ್ಪತ್ರೆಯ ನೂತನ ಗ್ರಂಥಾಲಯ ಕಟ್ಟಡ ಕಟ್ಟಲು ಉದ್ದೇಶಿಸಿರುವ ಸ್ಥಳದಲ್ಲಿ ಇದ್ದ ಆಡುಗೆ ಮನೆ ಮತ್ತು ಪಕ್ಕದ ವಾರ್ಡ್‌ಗಳಲ್ಲಿ ದೊರೆತಿರುವ ವಿವಿಧ ರೀತಿಯ ನಿರುಪಯುಕ್ತ ವಸ್ತುಗಳು ಮತ್ತು ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯದ ವಿವಿಧ ರೀತಿಯ ನಿರುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: ಕಛೇರಿ ಟಿಪ್ಪಣಿ ಅನುಮೋದನೆ ದಿನಾಂಕ:05.07.2023

--*

ಸಂಸ್ಥೆಯ ಬೋಧಕ ಆಸ್ಪತ್ರೆಯ ನೂತನ ಗ್ರಂಥಾಲಯ ಕಟ್ಟಡ ಕಟ್ಟಲು ಉದ್ದೇಶಿಸಿರುವ ಸ್ಥಳದಲ್ಲಿ ಇದ್ದ ಆಡುಗೆ ಮನೆ ಮತ್ತು ಪಕ್ಕದ ವಾರ್ಡ್‌ಗಳಲ್ಲಿ ದೊರೆತಿರುವ ವಿವಿಧ ರೀತಿಯ ನಿರುಪಯುಕ್ತ ವಸ್ತುಗಳು ಮತ್ತು ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯದ ವಿವಿಧ ರೀತಿಯ ನಿರುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವ ಸಂಬಂಧ, ಅಧಿಕೃತ ಸಂಸ್ಥೆಗಳಿಂದ/ಮಾರಟಗಾರರಿಂದ ದರಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಈ ಕೆಳಗಿನ ಷರತ್ತಿಗೊಳಪಟ್ಟು ತಮ್ಮ ದರಗಳನ್ನು ಈ ಅಧಿಸೂಚನೆ ಜೊತೆಗೆ ಲಗತ್ತಿಸಿದ ನಮೂನೆ (Formate of Quotations) ನಲ್ಲಿ ದಿನಾಂಕ: 27.07.2023 ರಂದು ಸಾಯಂಕಾಲ : 5.00 ಗಂಟೆಯ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು.

ಕ್ರ.ಸ.	ನಿರುಪಯುಕ್ತ ವಸ್ತುಗಳ ಹೆಸರು	ಅಂದಾಜು ತೂಕ
01	02	03
	ಬೋಧಕ ಆಸ್ಪತ್ರೆಯ ನೂತನ ಗ್ರಂಥಾಲಯ ಕಟ್ಟಡ ಕಟ್ಟಲು ಉದ್ದೇಶಿಸಿರುವ ಸ್ಥಳದಲ್ಲಿ ಇದ್ದ ಆಡುಗೆ ಮನೆ ಮತ್ತು ಪಕ್ಕದ ವಾರ್ಡ್‌ಗಳಲ್ಲಿ ದೊರೆತಿರುವ ನಿರುಪಯುಕ್ತ ವಸ್ತುಗಳು	
01	Oxygen copper pipe (35mm & 15mm)	26 Kg
02	Ceiling Fan	06 Nos
03	M.S. Doors (1.2 * 2.1m)	01 No
04	Wood Doors	29 Nos
05	Openable window (wood)	28 Nos
06	Collapsible gate	01 No
07	Grill door	02 Nos
	ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯ, ಹಾಸನ. ಇಲ್ಲಿ ದೊರೆತಿರುವ ನಿರುಪಯುಕ್ತ ವಸ್ತುಗಳು	
01	Iron	550 .00 Kg
02	Plastic	50 .00 Kg
03	News Paper	150.00 Kg
04	Tyres & Tubes	06 Nos
05	Aluminum	30 Nos
	ಕಾಲೇಜು ಕಟ್ಟಡ ಇಲ್ಲಿ ದೊರೆತಿರುವ ನಿರುಪಯುಕ್ತ ವಸ್ತುಗಳು	
01	News Paper	90 Kg
02	Fridge Double door	01 No
03	AC	01 No

ದರಪಟ್ಟಿ ಸಲ್ಲಿಸುವ ಸಂಸ್ಥೆಗಳಿಗೆ ಷರತ್ತು ಹಾಗೂ ನಿಬಂಧನೆಗಳು

1. ಸದರಿ ದರಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ನಿರ್ದೇಶಕರು, ಹಿಮ್ಸ್, ಹಾಸನ ಇವರಿಗೆ ಕಾಯ್ದಿರಿಸಲಾಗಿದೆ.
2. ಸದರಿ ವಸ್ತುಗಳ ಖರೀದಿಯು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999ರ ಮತ್ತು 2000 ನಿಯಮಗಳಿಗೆ ಒಳಪಟ್ಟಿರುತ್ತದೆ.
3. ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಂಸ್ಥೆಯ ನೊಂದಾಣಿ (Registration) ಪ್ರತಿ, GST ನೊಂದಾಣಿ ಮತ್ತು ಪಾನ್ ಕಾರ್ಡ್ ಪ್ರತಿಗಳನ್ನು ಲಗತ್ತಿಸತಕ್ಕದ್ದು.
4. ಮೂಲ ತಯಾರಿಕರಿಂದ ಪಡೆದ ಪರವಾನಗೆ ಪತ್ರ.
5. ಸೀಲು ಮಾಡಿದ ಲಕೋಟೆಯ ಮೇಲೆ "Quotation for Scrap Materials" ಎಂದು ತಪ್ಪದೆ ನಮೂದಿಸತಕ್ಕದ್ದು.
6. ಹಿಮ್ಸ್ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ನಿರುಪಯುಕ್ತಾಗೊಳಿಸಿರುವ ವಸ್ತುಗಳನ್ನು ದರಪಟ್ಟಿ ಮೂಲಕ ವಿಲೇವಾರಿ ಮಾಡಲು ದಿನಾಂಕ: [illegible] ದರಪಟ್ಟಿ ಆಹ್ವಾನಿಸಲಾಗಿದೆ. ಸದರಿ ನಿರುಪಯುಕ್ತ ವಸ್ತುಗಳನ್ನು ಖರೀದಿಸುವ ನಿರುಪಯುಕ್ತ ವಸ್ತುಗಳ ವ್ಯಾಪಾರಸ್ಥರಿಂದ, ಸಂಸ್ಥೆಗಳಿಂದ ದರಗಳನ್ನು ಸಲಿಸಲ್ಲು ಕೋರಲಾಗಿದೆ.

ವಿಶೇಷ ಸೂಚನೆ:-

ಅ.ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ದಿನಾಂಕ [illegible]2023ರಿಂದ [illegible]2023 ರವರಿಗೆ (ಭಾನುವಾರ ಹೊರತುಪಡಿಸಿ) ಕಛೇರಿ ವೇಳೆಯಲ್ಲಿ ಬೆಳಗ್ಗೆ 10.00ರಿಂದ ಸಂಜೆ 5.00ರೊಳಗೆ ನಿವಾಸಿ ವೈದ್ಯಾಧಿಕಾರಿಗಳು, ಹಿಮ್ಸ್ ಹೊಸ ಬೋಧಕ ಆಸ್ಪತ್ರೆ, ಹಾಸನ ಇವರ ಅನುಮತಿಯೊಂದಿಗೆ ವೀಕ್ಷಣೆ ಮಾಡಬಹುದು.

ಆ. ನಿರುಪಯುಕ್ತಗೊಳಿಸಿದ ವಸ್ತುಗಳನ್ನು ಈ ಕೆಳಗೆ ತಿಳಿಸಿರುವ ಸ್ಥಳದಿಂದ ವಿಲೇವಾರಿ ಮಾಡಲಾಗುವುದು.

ಹಿಮ್ಸ್ ಹೊಸ ಬೋಧಕ ಆಸ್ಪತ್ರೆ, (Cellar) ನೆಲಮಾಳಿಗೆ

7. ದರಪಟ್ಟಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ಮೊದಲೇ ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ವೀಕ್ಷಣೆ ಮಾಡಬಹುದಾಗಿದೆ. ವೀಕ್ಷಣೆ ಮಾಡದೇ ಇರುವುದು ಪ್ರಕ್ರಿಯೆಯು ಅಂತಿಮಗೊಳಿಸಿದ ಮೇಲೆ ಯಾವುದೇ ತಕರಾರು ಮಾಡುವಂತಿಲ್ಲ.
8. ಯಶಸ್ವಿ ಬಿಡ್‌ದಾರರು ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ಪ್ರಕ್ರಿಯೆಯು ಮುಗಿದ ನಂತರ 7 ದಿನದಳೊಳಗೆ ಒಂದೇ ಕಂತಿನಲ್ಲಿ ವಿಲೇವಾರಿ ಮಾಡಿಕೊಳ್ಳಬೇಕಾಗಿರುತ್ತದೆ.
9. ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಂಸ್ಥೆಯ ನೊಂದಾಣಿ (GST/PAN) ಪ್ರತಿಗಳನ್ನು ಲಗತ್ತಿಸುವುದು.
10. ಯಶಸ್ವಿ ಬಿಡ್ದುದಾರರು, ವಿಲೇವಾರಿ ಮಾಡಿಕೊಳ್ಳಲು ಅದಕ್ಕೆ ತಗಲುವ ಕೂಲಿ, ಸಾಗಾಣಿಕೆ ವೆಚ್ಚ, ವಾಹನ, ತೂಕದ ಯಂತ್ರ ವೆಚ್ಚ ಇತ್ಯಾದಿಗಳು, ವಿಲೇವಾರಿಗೆ ಸಂಬಂಧಿಸಿದ ಎಲ್ಲಾ ತರಹದ ವೆಚ್ಚಗಳನ್ನು ತಾವೇ ಭರಿಸಿಕೊಳ್ಳವುದು.
11. ದರಪಟ್ಟಿ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ದುದಾರರಿಗೆ ಒಪ್ಪಿಗೆ ಪತ್ರ (Confirmation Letter) ನೀಡಿದ 7 ದಿನಗಳೊಳಗೆ ಒಂದೇ ಕಂತಿನಲ್ಲಿ ವಿಲೇವಾರಿ ಮಾಡಿಕೊಳ್ಳಬೇಕಾಗಿರುತ್ತದೆ.

- ಭಾಗವಹಿಸಲು ಇಚ್ಛಿಸುವ ಬಿಡ್‌ದಾರರು ಮಾರುಕಟ್ಟೆ ದರಕ್ಕಿಂತ ಕಡಿಮೆ ದರ ಯಾಗಿರಕೂಡದು.
- ಈ ಮೇಲೆ ತಿಳಿಸಿರುವ ವಸ್ತುಗಳಿಗೆ ಸಂಬಂಧಿಸಿದ ತೂಕವು ಅಂದಾಜು ತೂಕವಾಗಿದ್ದು, ಅದನ್ನು ತೂಕ ಮಾಡಿದ ನಂತರ ಬರುವ ತೂಕಕ್ಕೆ ಹಣ ಪಾವತಿಸಬೇಕು.
- ದರಪಟ್ಟಿ ಮೊತ್ತಕ್ಕೆ ಅನುಗುಣವಾಗಿ PAN ಇದ್ದಲ್ಲಿ 1% TCS ಅಥವ PAN ಇಲ್ಲದಿದ್ದಲ್ಲಿ 10% TCS ಪಾವತಿಸಬೇಕು ಮತ್ತು GST 18% ತೆರಿಗೆಯನ್ನು ಅನ್ವಯಿತ ದರದಂತೆ ಹೆಚ್ಚುವರಿಯಾಗಿ ಪಾವತಿಸಬೇಕು. (Rate quoted is exclusive of all taxes & other Charges). (GST will be charged extra as applicable. TDS/TCS extra as applicable. All fee, taxes & levies etc if any will be borne by the bidder)

12. ಸರ್ಕಾರದಿಂದ ಮಾನ್ಯತೆ ಪಡೆದ (ನೊಂದಣಿಯಾದ) ತೂಕದ ಯಂತ್ರದಲ್ಲಿ ತೂಕ ಮಾಡಿಸುವುದು ಕಡ್ಡಾಯವಾಗಿರುತ್ತದೆ.

13. ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ಒಂದು ಲಾರಿಗೆ ತುಂಬಿಸಿದ ನಂತರ ಅದರ ತೂಕ ಯಂತ್ರ ಸಂಸ್ಥೆಯಿಂದ ಬಂದ ತೂಕಕ್ಕೆ ಬಿಡ್ಡಮಾಡಿದ ದರಕ್ಕೆ ಮೊದಲು ಹಣವನ್ನು ನಗದು ರೂಪದಲ್ಲಿ ಪಾವತಿಸುವುದು, ನಂತರ ಎರಡನೇ ಬಾರಿ ವೀಲೆವಾರಿಗೆ ಅವಕಾಶ ಕಲ್ಪಿಸಲಾಗುವುದು.
14. ವಿಲೇವಾರಿ ಸಮಿತಿಯು ದರಪಟ್ಟಿ ಪ್ರಕ್ರಿಯೆಗೆ ಸಂಬಂದಿಸಿದಂತೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.
15. ದರಪಟ್ಟಿಯನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ/ತಿರಸ್ಕರಿಸುವ/ ಮುಂದೂಡುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
16. ಯಶ್ವಸಿ ಬಿಡ್‌ದಾರರು ವಿಲೇ ಮಾಡುವಾಗ ಪರಿಸರಕ್ಕೆ ಅಥವಾ ಆರೋಗ್ಯಕ್ಕೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕಾನೂನುಬದ್ಧವಾಗಿ ಪಾಲಿಸಲು ಸೂಚಿಸಿದೆ.
17. Scrap Materials will be sold in "AS IS WHERE IS BASIS" and NO COMPLAINT basis and the whole items shall be taken delivery from the site by the successful bidders.
18. ಈ ಮೇಲಿನ ನಿಯಮ/ ನಿಬಂಧನೆಗಳ ಜೊತೆಗೆ ಸರ್ಕಾರದಿಂದ ಸೇರ್ಪಡೆಗೊಳಿಸುವ ನಿಯಮಗಳು ಯಾವುದಾದರು ಇದ್ದಲ್ಲಿ ಒಪ್ಪಿಕೊಳ್ಳಬೇಕಿರುತ್ತದೆ. ಯಾವುದಾದರು ಸಾಮಾನ್ಯ ನಿಯಮಗಳು ಬಿಟ್ಟು ಹೋಗಿದ್ದಲ್ಲಿ ಹರಾಜಿನ ನಂತರ ಸೇರ್ಪಡೆಗೊಳಿಸಲು ಸಂಸ್ಥೆಯ ಮುಖ್ಯಸ್ಥರಿಗೆ ಅಧಿಕಾರವನ್ನು ಕಾಯ್ದಿರಿಸಲಾಗಿದೆ.

14/7/23

ಮುಖ್ಯ ಆಡಳಿತಾಧಿಕಾರಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

13/7/23

ಪ್ರತಿಯನ್ನು ಈ ಕೆಳಕಂಡ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ ವಂದನೆಗಳೊಂದಿಗೆ ಸಲ್ಲಿಸಲಾಗುತ್ತಿದೆ.

1) ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೂ, ಜಿಲ್ಲಾ ಪಂಚಾಯತ್, ಹಾಸನ.
3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾಸನ.
4) ತಹಶೀಲ್ದಾರರು /ಕಾರ್ಯನಿರ್ವಾಹಕ ಅಧಿಕಾರಿಗಳು, ಹಾಸನ
5) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ.
6) ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಳಿ ನಿಯಮಿತ ನಂ.5, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18, ಇವರಿಗೆ ರವಾನಿಸುತ್ತಾ ನಿಗದಿತ ದಿನಾಂಕದ ಒಳಗಾಗಿ ತಮ್ಮ ದರಗಳನ್ನು ಸಲ್ಲಿಸಲು ಕೋರಿದೆ.
7) ಸೂಚನಫಲಕ , ಹೊಸ ಬೋಧಕ ಆಸ್ಪತ್ರೆ, ಹಿಮ್ಸ್, ಹಾಸನ ಮತ್ತು ವೈದ್ಯಕೀಯ ಕಾಲೇಜು, ಹಿಮ್ಸ್, ಹಾಸನ.
8) ನಿವಾಸಿ ವೈದ್ಯಾಧಿಕಾರಿಗಳು, ಬೋಧಕ ಆಸ್ಪತ್ರೆ,ಹಿಮ್ಸ್, ಹಾಸನ.
9) ಶುಶ್ರೂಷಕ ಅಧೀಕ್ಷಕರ ದರ್ಜೆ–1, ಬೋಧಕ ಆಸ್ಪತ್ರೆ,ಹಿಮ್ಸ್, ಹಾಸನ.
10) ಪ್ರಾಂಶುಪಾಲರು, ಸರ್ಕಾರಿ ಶುಶ್ರೂಷಕ ಮಹಾವಿದ್ಯಾಲಯ, ಹಾಸನ.